ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–17 ಸಂಚಿಕೆ–4 ಪುಟಗಳು–10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶಾರದೆಯ ಸನ್ನಿಧಿಯಲ್ಲಿ ಪ್ರತಿಷ್ಠಾಮಹೋತ್ಸವ





ತಾ.14–03–2017ರ ಮಂಗಳವಾರ ಮೀನ ಸಂಕ್ರಮಣದಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವದ ಸಂಭ್ರಮ. ಅಂದು ಶ್ರೀ ಶಾರದೆಯು ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ದಿವ್ಯಹಸ್ತಗಳಿಂದ ಪ್ರತಿಷ್ಠಾಪಿಸಲ್ಪಟ್ಟ ದಿನ. ಅಂದು ಬೆಳಿಗ್ಗೆ ಎಂಟು ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರ ನೇತೃತ್ವದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾವ್, ಕಾರ್ಯದರ್ಶಿ ಶ್ರೀ ಕೆ. ಸುರೇಶ ರಾವ್, ಕೋಶಾಧಿಕಾರಿ ಶ್ರೀ ಸುಧಾಕರ ರಾವ್, ಉಪಾಧ್ಯಕ್ಷರಾದ ಶ್ರೀ ಎಸ್. ಎಂ. ರಾವ್, ಮಹಿಳಾವೇದಿಕೆಯ ಶ್ರೀಮತಿ ಉಷಾ ಶ್ಯಾನುಭಾಗ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್, ಶ್ರೀಮತಿ ಉಷಾ ಮೋಹನದೇವ್ ಇತ್ಯಾದಿ ಸಮಾಜಬಾಂಧವರು ಶ್ರೀದೇವಿಯ ಸಮ್ಮುಖದಲ್ಲಿ ಪ್ರಾರ್ಥಿಸಿ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಸ್ವಾಧ್ಯಾಯ ಸಮಿತಿಯವರಿಂದ ರುದ್ರ ಹಾಗೂ ಪುರುಷಸೂಕ್ತ ಪಾರಾಯಣ, ಮಹಿಳಾವೇದಿಕೆಯವರಿಂದ ಶ್ರೀ ಸೂಕ್ತ, ದೇವಿ ಸೂಕ್ತ, ಲಲಿತಾ ಸಹಸ್ರನಾಮ, ಸೌಂದರ್ಯ ಲಹರಿ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣ ಹಾಗೂ ಭಜನಾ ಕಾರ್ಯಕ್ರಮ ನೆರವೇರಿತು. ದೇವಿಗೆ ಶ್ರೀ ಜಗದೀಶ ಉಪಾಧ್ಯಾಯರು ಶ್ರೀ ಶಿವಭಟ್ ಹಾಗೂ ಶ್ರೀ ಸುಬ್ರಹ್ಮಣ್ಯ ಭಟ್‌ರೊಂದಿಗೆ ಪಂಚಾಮೃತಾಭಿಷೇಕ, ಗಣಹೋಮ ಇತ್ಯಾದಿಗಳನ್ನು ವಿಧಿವತ್ತಾಗಿ ನೆರವೇರಿಸಿ ಸಮರ್ಪಿಸಿದರು. ನೆರೆದ ನೂರಾರು ಭಕ್ತರ ಸಮ್ಮುಖದಲ್ಲಿ ಮಧ್ಯಾಹ್ನ ಹನ್ನೆರಡು ಗಂಟೆಗೆ ಮಂಗಳಾರತಿ ಮಹಾಪೂಜೆಯನ್ನು ನೆರವೇರಿಸಲಾಯಿತು. ಶ್ರೀಯುತ ಸಜೆ ಜನಾರ್ಧನರಾಯರು ಪೂಜಾಕರ್ತೃಗಳಾಗಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಹಕರಿಸಿದರು. ದೇವಿಯನ್ನು ಬೆಳ್ಳಿಯ ಸಿಂಹಾಸನ, ಪ್ರಭಾವಳಿ ಹಾಗೂ ಕಿರೀಟದೊಂದಿಗೆ ಚಿನ್ನ ಹಾಗೂ ವಜ್ರದ ಆಭರಣಗಳಿಂದ ಅಲಂಕರಿಸಲಾಗಿತ್ತು. ಮಹಾಪೂಜೆ ಮುಗಿದ ಮೇಲೆ ಭಕ್ತರು ಭೋಜನ ಪ್ರಸಾದ ಸ್ವೀಕರಿಸಿದರು. ಅದೇ ದಿನ ಶ್ರೀ ಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕೆಲಸವೂ ಕಾರ್ಯಕರ್ತರ ಸಹಕಾರದಿಂದ ನೆರವೇರಿತು.

## ಶ್ರೀ ಶಾರದಾ ದೇವಸ್ಥಾನದಲ್ಲಿ ಕಿರುನವರಾತ್ರಿ–ದುರ್ಗಾನಮಸ್ಕಾರ



ತಾ.29–03–2017ನೇ ಬುಧವಾರ ಕಿರುನವರಾತ್ರಿ ಪೂಜೆಗಳು ಶ್ರೀ ಶಾರದಾ ದೇವಸ್ಥಾನದಲ್ಲಿ ಆರಂಭವಾಯಿತು. ಅಂದು ಚಾಂದ್ರಮಾನ ಪದ್ಧತಿಯ ಪ್ರಕಾರ ಯುಗಾದಿ–ಹೊಸ ಸಂವತ್ಸರದ ಆರಂಭ. ಅಂದಿನಿಂದ ವಸಂತಕಾಲದ ಈ ಒಂಬತ್ತು ದಿನಗಳ ಪೂಜೆಯು ದೇವಿಗೆ ವಿಶೇಷ. ಕಿರುನವರಾತ್ರಿಯ ಕೊನೆಯ ದಿನವೇ ರಾಮನವಮಿ. ಈ ಒಂಬತ್ತು ದಿನಗಳಲ್ಲಿಯೂ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದೆಯನ್ನು ವಿಶೇಷವಾಗಿ ಅಲಂಕರಿಸಿ ದಿನನಿತ್ಯವೂ ಪಾರಾಯಣ ಭಜನೆಗಳೊಂದಿಗೆ ಪೂಜಿಸಲಾಗುತ್ತಿತ್ತು. ನೂರಾರು ಸಮಾಜಬಾಂಧವರು ಹಾಗೂ ಭಕ್ತರು ಈ ದಿನಗಳಲ್ಲಿ ವಿಶೇಷವಾಗಿ ಪೂಜೆಯನ್ನು ಪ್ರಾಯೋಜಿಸಿ ಕೃತಾರ್ಥರಾದರು.

ಕಿರುನವರಾತ್ರಿಯ ಅಂಗವಾಗಿ ತಾ.5–4–2017 ಬುಧವಾರ ಸಂಜೆ ಸಂಘದ ವತಿಯಿಂದ ಮಹಿಳಾವೇದಿಕೆಯ ವಿಶೇಷ ಮುತುವರ್ಜಿಯಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ನೆರವೇರಿತು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ಋತ್ವಿಜರಾಗಿ ಆಗಮಿಸಿದ್ದರು. ಶ್ರೀ ಸುರೇಶ ಶ್ಯಾನುಭಾಗ್ ಹಾಗೂ ಶ್ರೀಮತಿ ಅನುರಾಧ ದಂಪತಿಗಳು ಪೂಜಾಕರ್ತೃಗಳಾಗಿ ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ರಾತ್ರಿ ಒಂಬತ್ತು ಗಂಟೆಗೆ ಮಹಾಪೂಜೆಯಾಯಿತು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಸಂಪ್ರಾಪ್ತಿಯಾಯಿತು. ಇನ್ನೂರಕ್ಕೂ ಹೆಚ್ಚು ಸಮಾಜಬಾಂಧವರು ಪಾಲ್ಗೊಂಡಿದ್ದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಆತ್ಮೀಯರೇ,

ನಮ್ಮ ಸಂಘದ ಆಶ್ರಯದಲ್ಲಿ ಹಾಗೂ ಜ್ಞಾನಭಾರತೀ ಉಡುಪಿ ಇದರ ಸಹಯೋಗದೊಂದಿಗೆ

**ಶ್ರೀ ಶಂಕರ ಜಯಂತಿ ಆಚರಣೆಯು**

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ತಾ.30-04-2017ನೇ ಆದಿತ್ಯವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ :

– ಆಡಳಿತ ಮಂಡಳಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.25-4-2017ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ (0820-2520754) ತಿಳಿಸಲು ವಿನಂತಿಸಲಾಗಿದೆ.

**ಕಾರ್ಯಕ್ರಮಗಳ ವಿವರ** : ಬೆಳಿಗ್ಗೆ 8-00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಉಪನಯನ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಟಿ.ಎಸ್. ರಮೇಶ್‌ರವರಿಂದ ಉಪನ್ಯಾಸ, ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ.

# ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

ಶತಮಾನದ ಹಿಂದೆ ಸ್ಥಾನಿಕ ಬ್ರಾಹ್ಮಣರಿಗೆ ಸಾಮಾಜಿಕವಾಗಿ ಸಂಘಟಿತರಾಗಲೇಬೇಕಾದ ಅವಶ್ಯಕತೆ ಇದ್ದಾಗ ಹುಟ್ಟಿದಂತಹ ನಮ್ಮ ಚೊಚ್ಚಲ ಸಂಘಟನೆಯೆಂದರೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ. ಸ್ಥಾನಿಕರು ಹೆಚ್ಚಾಗಿ ಕರಾವಳಿ ಕರ್ನಾಟಕದಲ್ಲೇ ವಾಸವಾಗಿದ್ದ ದಿನಗಳವು. ಆಗ ಶ್ರೀ ಸುಬ್ರಹ್ಮಣ್ಯ ಸಭೆಯು ಮಂಗಳೂರು ಮಾತ್ರವಲ್ಲದೇ ಉಡುಪಿ, ಪುತ್ತೂರು, ಸುಳ್ಯ, ಮಡಿಕೇರಿಯ ನಮ್ಮ ಸಮಾಜಬಾಂಧವರನ್ನೂ ಪ್ರತಿನಿಧಿಸುತ್ತಿತ್ತು. ಸ್ವಲ್ಪ ಕಾಲದ ನಂತರ ಉದ್ಯೋಗ ನಿಮಿತ್ತ ಮುಂಬಯಿ ಮಹಾನಗರಿಗೆ ತೆರಳಿದ ನಮ್ಮ ಸಮಾಜ ಬಾಂಧವರು ಅಲ್ಲಿ ಕೂಡಾ ಶ್ರೀ ಸುಬ್ರಹ್ಮಣ್ಯ ಸಭಾ ಎಂಬ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಈ ಸಂಸ್ಥೆಯೂ ಕೇವಲ ಮುಂಬಯಿಯಲ್ಲಿ ವಾಸವಾಗಿದ್ದವರನ್ನು ಮಾತ್ರ ಪ್ರತಿನಿಧಿಸದೇ ಊರಿನಲ್ಲಿ ಇದ್ದ ನಮ್ಮ ಸಮಾಜದ ಬಡಬಗ್ಗರಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಾ, ಊರಿನಿಂದ ಅವಕಾಶವನ್ನರಸಿ ಮುಂಬಯಿಗೆ ಬಂದವರಿಗೆ ಆಶ್ರಯ ವನ್ನೀಯುತ್ತಾ ಸಮಗ್ರ ಸ್ಥಾನಿಕ ಸಮಾಜಕ್ಕೆ ಸಹಾಯ ಹಸ್ತವನ್ನು ಚಾಚುತ್ತಿತ್ತು. ಮುಂದೆ ಊರುಗಳು ದೊಡ್ಡದಾದಂತೆ, ಸಂಘಟನೆಗಳಲ್ಲಿ ಪಾಲ್ಗೊಳ್ಳುವ ಸದಸ್ಯರ ಸಂಖ್ಯೆ ಹೆಚ್ಚುತ್ತಾ ಬಂದಂತೆ ಉಡುಪಿ, ಬೆಂಗಳೂರು, ಇತ್ಯಾದಿ ಕಡೆಗಳಲ್ಲೂ ಸಂಘಗಳು ಸ್ಥಾಪನೆಯಾದವು. ಈಗ ಕುಂದಾಪುರ, ಕಾರ್ಕಳ, ಮೂಡಬಿದ್ರೆ, ವಿಟ್ಲ, ಕಡಬ, ಪುತ್ತೂರು, ಸುಳ್ಯ, ಮೂಲ್ಕಿ, ಪಾವಂಜೆ ಹೀಗೆ ಪ್ರತಿಯೊಂದು ಊರುಗಳಲ್ಲೂ ನಮ್ಮ ಸಂಘಗಳು ಸ್ಥಾಪನೆಯಾಗಿವೆ. ಪಡುಬಿದ್ರೆ ಹಾಗು ಸುರತ್ಕಲ್ ಸಂಘಗಳು ತೀರಾ ಇತ್ತೀಚೆಗೆ ಸ್ಥಾಪನೆಯಾದ ಸಂಘಗಳು.

ಹೀಗೆ ನಾನಾ ಕಡೆಗಳಲ್ಲಿ ಸಂಘಗಳು ಸ್ಥಾಪನೆಯಾದಂತೆ ಆಯಾ ಊರುಗಳ ಸದಸ್ಯರು ತಮ್ಮ ಊರಿನ ಸಂಘಗಳ ಚಟುವಟಿಕೆಗಳಲ್ಲೇ ವ್ಯಸ್ತರಾದುದರಿಂದ ಮಂಗಳೂರು ಉಡುಪಿಯಂತಹಾ ಸಮಗ್ರ ಸ್ಥಾನಿಕ ಸಮಾಜವನ್ನೇ ಪ್ರತಿನಿಧಿಸುತ್ತಿದ್ದ ಹಳೆಯ ಸಂಘಗಳ ಚಟುವಟಿಕೆಗಳು ಕೂಡಾ ಈಗ ಆಯಾ ಊರಿಗೆ ಸೀಮಿತವಾಗುತ್ತಿವೆ. ಇದರಿಂದಾಗಿ ಒಂದು ಸಂಘದ ಸದಸ್ಯರಿಗೆ ನಮ್ಮದೇ ಸಮಾಜದ ಇನ್ನೊಂದು ಸಂಘದ ಸದಸ್ಯರೊಂದಿಗೆ ಪರಸ್ಪರ ಸಂವಹನ ಹಾಗೂ ಪರಿಚಯ ಇಲ್ಲದಂತಾಗಿರುವುದು, ಇನ್ನೊಂದು ಸಂಘದ ಚಟುವಟಿಕೆಗಳ ಬಗ್ಗೆ ತಿಳಿಯದಂತಾಗಿರುವುದು ವಿಪರ್ಯಾಸ ವಲ್ಲವೇ? ಅಷ್ಟು ಮಾತ್ರವಲ್ಲದೇ ಆಯಾ ಊರಿನಲ್ಲಿರುವ ನಮ್ಮವರ ಆರ್ಥಿಕ, ಶೈಕ್ಷಣಿಕ ಸಾಮಾಜಿಕ ಸ್ಥಿತಿಯನ್ನವಲಂಬಿಸಿ ಪ್ರತಿಯೊಂದು ಸಂಘಗಳ ಆದ್ಯತೆಯ ವಿಷಯಗಳೂ ಬೇರೆ ಬೇರೆಯಾಗುತ್ತಿದೆ. ವಿಚಾರ ಧಾರೆಯೂ ಬೇರೆ ಬೇರೆಯಾಗುತ್ತಿವೆ. ಹೀಗೆ ಒಗ್ಗಟ್ಟಿನ ನಡುವೆಯೂ ಪ್ರತ್ಯೇಕತೆಯೂ ನುಸುಳಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ತಿಳಿಯುತ್ತದೆ. ಹೀಗೆ ಒಂದಾಗಿಯೇ ಇದ್ದರೂ ಪ್ರತ್ಯೇಕವಾಗಿ ಬಿಟ್ಟಿದ್ದ ನಮ್ಮ ಸಂಘಗಳು ಎಲ್ಲರೂ ಒಟ್ಟಾಗಿ ಬೆರೆತು ಕೆಲಸ ಮಾಡುವುದರ ಸವಿಯನ್ನು ಸವಿದದ್ದು 2012 ರಲ್ಲಿ ಶ್ರೀಶಾರದಾ ಮಂಟಪದಲ್ಲಿ ನಡೆದ ಸಮಾವೇಶದಲ್ಲಿ. ಆಗ ಸೇರಿದ್ದ ಸಮಾಜ ಬಾಂಧವರು ಎಲ್ಲಾ ಸಂಘಗಳು ಕನಿಷ್ಠ ವರ್ಷಕ್ಕೊಂದೆರಡು ಬಾರಿಯಾದರೂ ಒಟ್ಟಿಗೆ ಸೇರಿ ಕೆಲಸಮಾಡುವಂತಹಾ ವ್ಯವಸ್ಥೆಯೊಂದರ ನಿರ್ಮಾಣವಾಗಬೇಕೆಂದು ಕರೆನೀಡಿದ್ದರ ಪರಿಣಾಮವಾಗಿ ಉದಯಿಸಿದ್ದೇ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ.

ಸ್ಥಾನಿಕ ಬ್ರಾಹ್ಮಣ ಮಹಾಮಂಡಲವು ಒಂದು ಸಂಘವಲ್ಲ, ಇದು ನಮ್ಮ ಸಂಘಗಳ ಒಕ್ಕೂಟ. ಸ್ಥಾನಿಕ ಬ್ರಾಹ್ಮಣರ ದೇಶವಿದೇಶಗಳಲ್ಲಿರುವ ಎಲ್ಲಾ ಸಂಘಗಳು ಈ ಒಕ್ಕೂಟದ ಸದಸ್ಯರಾಗಬಹುದು. ಹಾಗೆಯೇ ನಮ್ಮ ಸಮಾಜದಲ್ಲಿ ಸಾವಿರಾರು ಜನರು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವವರಿದ್ದಾರೆ, ಮೇಧಾವಿಗಳಿದ್ದಾರೆ, ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದವರಿದ್ದಾರೆ, ಪ್ರಭಾವಶಾಲೀ ವ್ಯಕ್ತಿಗಳಿದ್ದಾರೆ, ಶ್ರೀಮಂತರಿದ್ದಾರೆ, ಸ್ವತಃ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದವರಿದ್ದಾರೆ. ದೇಶವಿದೇಶಗಳಲ್ಲಿ ಹರಡಿಕೊಂಡಿರುವ ಇವರನ್ನು ಬೆಸೆಯುವುದರ ಮೂಲಕ ಅಂತರಾಷ್ಟ್ರೀಯ ಮಟ್ಟದ ಜಾಲವನ್ನೇ ನಾವು ಸೃಷ್ಟಿಸಬಹುದು. ಇಂತಹಾ ಸಂಪನ್ಮೂಲ ವ್ಯಕ್ತಿಗಳ ಜ್ಞಾನ ಹಾಗೂ ಅನುಭವದ ಉಪಯೋಗ ನಮ್ಮ ಸಮಾಜಕ್ಕೂ ದೊರಕಲಿ ಎಂಬ ಉದ್ದೇಶದಿಂದ ಇಂತಹಾ ಸಂಪನ್ಮೂಲ ವ್ಯಕ್ತಿಗಳಿಗೂ ಈ ಒಕ್ಕೂಟದ ಸದಸ್ಯರಾಗುವ ಅವಕಾಶ ಕಲ್ಪಿಸಲಾಗಿದೆ (ಪಾರ್ಲಿಮೆಂಟಿನಲ್ಲಿ ಲೋಕಸಭೆ ಹಾಗೂ ರಾಜ್ಯಸಭೆ ಇದ್ದಂತೆ). ಮಹಾಮಂಡಲದ ನಿತ್ಯದ ಕಾರ್ಯಕೆಲಸಗಳನ್ನು ನಿಭಾಯಿಸಲಿಕ್ಕೋಸ್ಕರ ಸದಸ್ಯರೊಳಗೆ ಮೂರುವರ್ಷಗಳ ಅವಧಿಗೆ ಆಯ್ಕೆಯಾಗುವ ಓರ್ವ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿ ಇತ್ಯಾದಿ ಹುದ್ದೆಗಳನ್ನು ಕಲ್ಪಿಸಲಾಗಿದೆ. ಪ್ರತೀಬಾರಿಯೂ ಹೊಸತನ–ಹೊಸ ವಿಚಾರ ಮೂಡಬೇಕೆಂದು ಒಮ್ಮೆ ಆಯ್ಕೆಯಾದವನು ಇನ್ನೊಮ್ಮೆ ಅದೇ ಹುದ್ದೆಗೆ ಆಯ್ಕೆಯಾಗಬಾರದೆಂಬ ನಿಯಮವನ್ನು ರೂಪಿಸಲಾಗಿದೆ. ದಿನನಿತ್ಯದ ಖರ್ಚಿಗೋಸ್ಕರ ಸದಸ್ಯರಿಂದ ಸದಸ್ಯತನ ಶುಲ್ಕ ಪಡೆದು ಠೇವಣಿ ಇರಿಸಲಾಗಿದೆ. ಹೀಗೆ ನಮ್ಮ ಸಮಾಜದ ಎಲ್ಲಾ ಸಂಘಟನೆಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳನ್ನು ಒಂದು ಛತ್ರದಡಿ ಒಗ್ಗೂಡಿಸುವ ಅಮೋಘ ಕಲ್ಪನೆಯ ಕೂಸು ಮಹಾಮಂಡಲ.

ನಮ್ಮ ಸಮಾಜದ ಎಲ್ಲಾ ಸಂಘಟನೆಗಳೊಂದಿಗೆ ಅತ್ಯುತ್ತಮ ಮಟ್ಟದ ಸಂವಹನೆಯನ್ನು ಸಾಧಿಸಿ, ಅವುಗಳ ಸಹಕಾರದಿಂದ ದೇಶವಿದೇಶಗಳಲ್ಲಿ ಚದುರಿಹೋಗಿರುವ ನಮ್ಮೆಲ್ಲಾ ಸಮಾಜಬಾಂಧವರಲ್ಲಿ ನಾವು ಸ್ಥಾನಿಕ ಬ್ರಾಹ್ಮಣರು, ನಾವು ಶ್ರೀ ಶೃಂಗೇರಿ ಮಠದ ಶಿಷ್ಯರು ಎಂಬ ಭಾವನೆಯನ್ನು ಜಾಗೃತವಾಗಿಡುವುದು ಮಹಾಮಂಡಲದ ಪ್ರಮುಖ ಧ್ಯೇಯಗಳಲ್ಲೊಂದು. ಯಾವುದೇ ಒಂದು ಸಂಘವು ಯಾವುದೇ ಕಾರಣಕ್ಕೂ ನಿಷ್ಕ್ರಿಯವಾಗದಂತೆ, ತಮ್ಮ ಚಟುವಟಿಕೆಗಳನ್ನು ಮುಂದುವರಿಸುವಂತೆ ಹುರಿದುಂಬಿಸುತ್ತಾ ಇರುವುದು ಇದು ಮಾಡಬಹುದಾದ ಇನ್ನೊಂದು ಕೆಲಸ. ನಮ್ಮ ಪ್ರಾಚೀನ ದೇವಸ್ಥಾನಗಳನ್ನು ಉಳಿಸುವುದು, ಅವುಗಳ ಜೀರ್ಣೋದ್ಧಾರಕ್ಕೆ ಬೆಂಬಲ ನೀಡುವುದು, ದಿನನಿತ್ಯದ ವ್ಯವಹಾರಕ್ಕೆ ಆರ್ಥಿಕ ಸಹಕಾರ ಒದಗಿಸುವುದು ಮಹಾಮಂಡಲ ಕೈಗೆತ್ತಿಕೊಳ್ಳಬೇಕಾದ ಮತ್ತೊಂದು ಕೆಲಸ. ಮಹಾಮಂಡಲವು ಯಾವುದಾದರು ದೊಡ್ಡ ಕೆಲಸವನ್ನು ಕೈಗೆತ್ತಿಕೊಂಡು ಸಂಪೂರ್ಣಗೊಳಿಸಿ ನಮ್ಮ ಸಮಾಜಕ್ಕೆ ಕೀರ್ತಿ ತರಬಹುದು, ನಮ್ಮ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ನೀಲಿನಕಾಶೆ ಸಿದ್ಧಪಡಿಸಬಹುದು, ಅಂತರ್ಜಾಲದಲ್ಲಿ ಪ್ರಪಂಚದೆಲ್ಲೆಡೆ ಇರುವ ಸಮಾಜ ಬಾಂಧವರ ವಿಳಾಸದ ಅಂಕಣ, ವೈವಾಹಿಕ ಅಂಕಣ, ಉದ್ಯೋಗಾವಕಾಶಗಳ ಅಂಕಣಗಳನ್ನು ಆರಂಭಿಸಬಹುದು. ತನ್ನಲ್ಲಿರುವ ಸಂಪನ್ಮೂಲ ವ್ಯಕ್ತಿಗಳ ಪಡೆಯಿಂದ ಪ್ರಪಂಚದ ಯಾವುದೇ ಮೂಲೆಯಲ್ಲಿರುವ ನಮ್ಮ ಸಮಾಜದ ವ್ಯಕ್ತಿಗೆ ಬೇಕಾದ ಸಹಾಯ ಒದಗಿಸಬಹುದು. ಹೀಗೆ ಮಹಾಮಂಡಲಕ್ಕೆ ಗುಪ್ತಗಾಮಿನಿಯಾಗಿ ಹರಿಯುತ್ತಾ ಸಾಧಿಸಬಹುದಾದ ಕೆಲಸ ಬೆಟ್ಟದಷ್ಟಿದೆ.

ಆರಂಭದಲ್ಲಿ ಮಹಾಮಂಡಲದ ರಚನೆಗೆ ವಿರೋಧವೂ ಇದ್ದಿತು. ಮಹಾಮಂಡಲವು ದೊಡ್ಡಣ್ಣನಂತೆ ಇತರ ಸಂಘಗಳ ಮೇಲೆ ಅಧಿಕಾರ ಚಲಾಯಿಸುವ, ಹಸ್ತಕ್ಷೇಪ ಮಾಡುವ ಸಂಸ್ಥೆಯಾಗುತ್ತದೇನೋ ಎಂಬ ಭಯ ಈ ವಿರೋಧಕ್ಕೆ ಕಾರಣವಾಗಿತ್ತು. ಅದೇ ರೀತಿ ಇಷ್ಟೆಲ್ಲಾ ನಮ್ಮವರ ಸಂಘಗಳು ಇರುವಾಗ ಈ ಹೊಸ ಸಂಘ ಬೇಕೆ? ಎಂಬ ಪ್ರಶ್ನೆಯೂ ಕೆಲವರ ಮನದಲ್ಲಿ ಮೂಡಿತ್ತು. ಇದು ಸಂಘವಲ್ಲ ಒಕ್ಕೂಟ ಎಂದು ಅರ್ಥವಾದ ಮೇಲೆ "ಬೇಡ" ಎಂದು ವಿರೋಧಿಸಿದವರೂ, "ಬೇಕೇ" ಎಂದು ಪ್ರಶ್ನಿಸಿದವರೂ ಮುಂದೆ ಅದರ ಸದಸ್ಯರಾಗಿ ಸಹಕರಿಸಿದ್ದು ಮಾತ್ರವಲ್ಲದೆ ತಮ್ಮ ಸೇವೆಯನ್ನೂ ಅದಕ್ಕೆ ನೀಡಿರುವುದು ಸುತ್ತ್ಯಾರ್ಹ. ಆದರೆ ಯಾಕೋ ಏನೋ ಮಹಾಮಂಡಲವು ತನ್ನಿಂದ ನಿರೀಕ್ಷಿಸಿದ್ದನ್ನು ಸಾಧಿಸಿದಂತೆ ಕಾಣುವುದಿಲ್ಲ. ಮುಖ್ಯವಾಗಿ ಮಹಾ ಮಂಡಲದ ಸ್ಥಾಪನೆಯ ಉದ್ದೇಶ ಹಾಗೂ ಕಾರ್ಯವ್ಯಾಪ್ತಿಯ ಬಗ್ಗೆ ಸದಸ್ಯರು ಹಾಗೂ ಪದಾಧಿಕಾರಿಗಳಲ್ಲಿದ್ದ ಗೊಂದಲ, "ಸಬ್ ಕಾ ಸಾಥ್, ಸಬ್ ಕಾ ವಿಕಾಸ್" ತರಹದ ಕಾರ್ಯವೈಖರಿಯಲ್ಲಿನ ಅನನುಭವ, ಸಿಗಬೇಕಾದ ಸೂಕ್ತ ಸ್ಪಂದನ ಸಿಗಬೇಕಾದಲ್ಲಿಂದ ಸಿಗದಿರುವುದು ಸಮಯದ ಅಭಾವ ಇದಕ್ಕೆ ಕಾರಣವಿರಬಹುದು. ಕಳೆದ ಐದು ವರ್ಷಗಳಲ್ಲಿ ಯಾವುದೇ ಹೊಸ ಸದಸ್ಯರು ಮಹಾಮಂಡಲಕ್ಕೆ ಸೇರ್ಪಡೆಯಾಗಿಲ್ಲ. ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆಯು ಇನ್ನೂ ಬೆರಳೆಣಿಕೆಯಲ್ಲಿದೆ. ಸ್ಥಾಪನೆಯಾದ ಯಾವ ಉದ್ದೇಶಗಳಲ್ಲಿಯೂ ಹೇಳುವಂತಹಾ ಪ್ರಗತಿಯಾಗಿಲ್ಲ. ಹೀಗೆ ನಿಂತ ನೀರಿನಂತಿದ್ದ ಮಹಾಮಂಡಲಕ್ಕೆ ಈಗ ಹೊಸ ಆಡಳಿತೆ ಮಂಡಳಿ ಬಂದಿದೆ. ಖ್ಯಾತ ನ್ಯಾಯವಾದಿಗಳೂ, ಕರ್ನಾಟಕ ಸರಕಾರದ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರೂ ಆಗಿರುವ ಶ್ರೀ ಎನ್. ಕೆ. ಜಗನ್ನಿವಾಸರಾಯರು ಇದರ ಅಧ್ಯಕ್ಷರಾಗಿದ್ದಾರೆ. ಮೂಡಬಿದ್ರೆಯ ಶ್ರೀ ದೇವಾನಂದ ಭಟ್ ಇವರು ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಪದಗ್ರಹಣ ಸಮಾರಂಭ ಹಾಗೂ ಲಾಂಛನ ಬಿಡುಗಡೆಯೊಂದಿಗೆ ಹುಮ್ಮಸ್ಸಿನಿಂದ ತಮ್ಮ ಕೆಲಸವನ್ನು ಆರಂಭಿಸಿದ್ದಾರೆ. ಇವರ ಸಾರಥ್ಯದಲ್ಲಿ ಮಹಾಮಂಡಲವು ತಾನು ಹುಟ್ಟಿದ ಉದ್ದೇಶಗಳನ್ನು ಈಡೇರಿಸಲಿ ಹಾಗೂ ಬಲಿಷ್ಠ ಸಂಸ್ಥೆಯಾಗಿ ಮೂಡಿಬರಲಿ ಎಂದು ಆಶಿಸುತ್ತೇನೆ.


### ಸಂಪಾದಕ ಮಂಡಳಿ

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

–ಸಂಪಾದಕ ಮಂಡಳಿ


ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ–20

## ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ



ಉಡುಪಿ ಜಿಲ್ಲೆಯು ದೇವಿಯ ಆರಾಧನೆಗೆ ಪ್ರಸಿದ್ಧಿಯಾಗಿದ್ದರೂ ಇಲ್ಲಿರುವ ಶ್ರೀ ಶಾರದಾ ದೇವಸ್ಥಾನಗಳು ಮಾತ್ರಾ ಎರಡೇ ಎರಡು. ಒಂದು ಚಿಟ್ಪಾಡಿಯಲ್ಲಿರುವ ಶ್ರೀ ಶಾರದಾಂಬಾ ದೇವಸ್ಥಾನ ಹಾಗೂ ಇನ್ನೊಂದು ಕುಂಜಿಬೆಟ್ಟಿನಲ್ಲಿರುವ ಶ್ರೀ ಶಾರದಾ ದೇವಸ್ಥಾನ. ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನವು ಶ್ರೀ ಶಾರದಾ ಮಂಟಪವಿರುವ ಕುಂಜಾರು ದಾಸಪ್ಪಯ್ಯ ಗಾರ್ಡನ್‌ನ ಆವರಣದಲ್ಲಿಯೇ ಇದ್ದು ಭಕ್ತಾದಿಗಳ ಅಪೇಕ್ಷೆಯಂತೆ ಶ್ರೀ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳಾಗಿದ್ದ ಶ್ರೀ ಶ್ರೀಮದಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರ ದಿವ್ಯಹಸ್ತಗಳಿಂದ 1988ನೇ ಇಸವಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟದ್ದಾಗಿದೆ. ಮುಂದೆ 2004ನೇ ಇಸವಿಯಲ್ಲಿ ದೇವಸ್ಥಾನದ ವಿಸ್ತರಣಾಕಾರ್ಯವು ನಡೆದು 11–03–2004ರಂದು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯಹಸ್ತಗಳಿಂದ ಶ್ರೀ ಶಾರದೆ, ಗಣಪತಿ ಹಾಗೂ ಶ್ರೀ ಶಂಕರಾಚಾರ್ಯರ ವಿಗ್ರಹಗಳ ಪುನರ್‌ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕವು ನೆರವೇರಿದೆ. 2007ನೇ ಇಸವಿಯಲ್ಲಿ ಕಿರುಸಮಾರಂಭಗಳಿಗಾಗಿ ದೇವಸ್ಥಾನದ ಬದಿಯಲ್ಲಿ ಜ್ಞಾನಮಂದಿರವೆಂಬ ಕಟ್ಟಡವನ್ನು ಕಟ್ಟಲಾಗಿದೆ.

ಶ್ರೀ ಶಾರದೆ ಇಲ್ಲಿನ ಪ್ರಧಾನದೇವರು. ಅಮೃತಶಿಲೆಯ ಸುಂದರಮೂರ್ತಿ. ಗಣಪತಿ ಹಾಗೂ ಶ್ರೀ ಶಂಕರಾಚಾರ್ಯರನ್ನು ಪ್ರತ್ಯೇಕ ಗುಡಿಗಳಲ್ಲಿ ಪ್ರತಿಷ್ಠಾಪಿಸಿದ್ದಾರೆ. ದೇವಸ್ಥಾನದ ಹಿಂಬದಿಯಲ್ಲಿ ನಾಗದೇವರ ಗುಡಿ ಇದೆ. ಗರ್ಭಗುಡಿಯಲ್ಲಿ ಶ್ರೀ ಚಕ್ರವನ್ನು ಪ್ರತಿಷ್ಠಾಪಿಸಲಾಗಿದೆ. ಅಂಗೈಗಾತ್ರದ ಶಿವಲಿಂಗಕ್ಕೂ ಅಭಿಷೇಕ, ಪೂಜೆ ಸಲ್ಲುತ್ತಿದೆ.

ತ್ರಿಕಾಲಪೂಜೆ, ಹೂವಿನಪೂಜೆ, ರುದ್ರಾಭಿಷೇಕ, ಪಾರಾಯಣ ಇತ್ಯಾದಿ ನಿತ್ಯಸೇವೆಗಳು ಪ್ರತಿನಿತ್ಯವೂ ನಡೆಯುತ್ತಿರುತ್ತವೆ. ಪ್ರತೀ ತಿಂಗಳ ಸಂಕಷ್ಟಿಯಂದು ಸಾಮೂಹಿಕ ಗಣಹೋಮ ನಡೆಯುತ್ತದೆ. ಪಂಚಮಿಯಂದು ತನುಸೇವೆ ನಡೆಯುತ್ತದೆ. ಮೂಲಾ ನಕ್ಷತ್ರದಂದು ಶ್ರೀದೇವಿಗೆ ಸಹಸ್ರಾರ್ಚನೆ ನಡೆಯುವುದು ಇಲ್ಲಿಯ ವಿಶೇಷ.

ಸಮಾಜಬಾಂಧವರು ಹಾಗೂ ಭಕ್ತಾದಿಗಳಿಂದ ಪ್ರತೀದಿನವೂ ಸಂಜೆಯ ಹೊತ್ತಿಗೆ ಭಜನೆ ಹಾಗೂ ಲಲಿತಾಸಹಸ್ರನಾಮ ಪಾರಾಯಣ ನಡೆಯುತ್ತದೆ. ಪ್ರತೀ ಆದಿತ್ಯವಾರ ಸಂಜೆ ಸ್ವಾಧ್ಯಾಯ ಸಮಿತಿಯವರಿಂದ ಪಾರಾಯಣ ಹಾಗೂ ಪಠಣೆ ನಡೆಯುತ್ತದೆ. ಪ್ರತೀವರ್ಷ ನವರಾತ್ರಿಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ವಿಜಯದಶಮಿಯನ್ನು ಚಂಡಿಕಾಹೋಮದೊಂದಿಗೆ ನಾಡಹಬ್ಬದಂತೆ ಆಚರಿಸಲಾಗುತ್ತದೆ. ನಾಗರಪಂಚಮಿ, ಶಿವರಾತ್ರಿ, ಕಿರುನವರಾತ್ರಿಗಳಂದು ವಿಶೇಷಪೂಜೆ ಇರುತ್ತದೆ. ಸಂಘದ ವತಿಯಿಂದ ಸಾಮೂಹಿಕ ದುರ್ಗಾನಮಸ್ಕಾರ, ವರಮಹಾಲಕ್ಷ್ಮೀವೃತಗಳನ್ನು ಪ್ರತೀ ವರ್ಷವೂ ನಡೆಸಿಕೊಂಡು ಬರಲಾಗುತ್ತಿದೆ.

ಶ್ರೀ ಸ್ಥಾನಿಕ ಬ್ರಾಹಣ ಸಂಘ ಕುಂಜಿಬೆಟ್ಟು, ಉಡುಪಿ ಇದರ ಆಡಳಿತದಲ್ಲಿ ಈ ದೇವಸ್ಥಾನವಿದೆ. ದೇವಸ್ಥಾನದ ದಿನನಿತ್ಯದ ಉಸ್ತುವಾರಿಯನ್ನು ದೇವಸ್ಥಾನ ವೇದಿಕೆಯವರು ನೋಡಿಕೊಳ್ಳುತ್ತಾರೆ. ಪ್ರಸ್ತುತ ಶ್ರೀ ಜಿ.ಕೆ.ಕೊಲ್ಲೆ ಇವರು ಈ ವೇದಿಕೆಯ ಅಧ್ಯಕ್ಷರು ಹಾಗೂ ಶ್ರೀ ವೈ.ವಿಠಲ ರಾವ್ ಇವರು ಸಂಚಾಲಕರಾಗಿದ್ದಾರೆ. ಹೆಚ್ಚಿನ ವಿವರಗಳಿಗಾಗಿ 9036443884 ನಲ್ಲಿ ಸಂಘದ ಕಾರ್ಯದಶಿಯವರಾದ ಶ್ರೀ ಕೆ. ಸುರೇಶ ರಾಯರನ್ನು ಸಂಪರ್ಕಿಸಬಹುದು.


*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

# ಯುಗಾದಿ

– **ಸಾವಿತ್ರಿ ಮನೋಹರ್, ‘ವಾಸುಕಿ’, ಕೋರ್ಟ್ ಬಳಿ, ಕಾರ್ಕಳ.**

ಇಂದು ಯುಗಾದಿ. ಹೇಮಲಂಬಿ ಹೇವಿಳಂಬಿ ಸಂವತ್ಸರದ ಆರಂಭದ ದಿನ. ಯುಗದ ಆದಿ ಎಂದರೆ ಯುಗದ ಮೊದಲ ದಿನ ಎಂದು ಅರ್ಥ. ಜಗತ್ತಿನ ಪೂರ್ಣ ಸೃಷ್ಟಿಯಾದ ದಿನವೆಂದು ಬ್ರಹ್ಮಾಂಡ ಪುರಾಣದಲ್ಲಿ ಉಲ್ಲೇಖಿಸಲಾಗಿದೆ.

ಬ್ರಹ್ಮದೇವನು ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನ ಸೂರ್ಯೋದಯದ ವೇಳೆಯಲ್ಲಿ ಗ್ರಹ, ಋತು, ಆಯನ, ತಿಂಗಳು, ವಾರ, ತಿಥಿ, ನಕ್ಷತ್ರ, ಕರಣ, ಯೋಗಗಳ ಅಧಿಪತಿಗಳನ್ನೊಳಗೊಂಡ ಸಮಸ್ತ ಲೋಕವನ್ನು ಸೃಷ್ಟಿಸಿದ. ಅಂದಿನಿಂದಲೇ ಕಾಲದ ಗಣನೆಯನ್ನು ಆರಂಭಿಸಲಾಯ್ತು. ಈ ಚೈತ್ರಶುದ್ಧ ಪಾಡ್ಯಮಿಯನ್ನು ಯುಗಾದಿ ಎಂದು ಪರಿಗಣಿಸಲಾಯಿತು. ಆದ್ದರಿಂದ ಪಂಚಾಂಗವೆಂಬ ಕಾಲಗಣನಾ ಕೃತಿಯನ್ನು ದೇವರ ಮುಂದಿರಿಸಿ ಪೂಜಿಸುವ ಸತ್‌ಸಂಪ್ರದಾಯ ಆರಂಭವಾಯ್ತು.

ಪೌರಾಣಿಕ ದೃಷ್ಟಿಯಿಂದ ನೋಡಿದರೂ ಯುಗಾದಿಗೆ ಬಹಳಷ್ಟು ಮಹತ್ವ ಕಂಡುಬರುತ್ತದೆ. ಹೇಮಾದ್ರಿ ಪಂಡಿತನ ಚತುರ್ವರ್ಗ ಚಿಂತಾಮಣಿ ಎಂಬ ಗ್ರಂಥದಲ್ಲಿ ಚೈತ್ರ ಮಾಸದ ಮೊದಲದಿನ ವರ್ಷದ ಆರಂಭ ಎಂಬ ಉಲ್ಲೇಖವಿದೆ. ಅಥರ್ವಣ ವೇದ, ಶತಪಥ ಬ್ರಾಹ್ಮಣ, ಧರ್ಮ ಸಿಂಧು ಮತ್ತು ಮಹಾಭಾರತಗಳಲ್ಲಿಯೂ ಯುಗಾದಿಯ ಬಗ್ಗೆ ಉಲ್ಲೇಖವಿದೆ. ಕೃತಯುಗದ ಪ್ರಾರಂಭದ ದಿನವೂ ಯುಗಾದಿಯೇ. ತ್ರೇತಾಯುಗದ ರಾಮಾಯಣವನ್ನು ಗಮನಿಸಿದರೆ ಸೀತಾಪಹರಣ ಮಾಡಿದ ರಾವಣನನ್ನು ಕೊಂದು, ಅಯೋಧ್ಯೆಗೆ ಬಂದ ಸುದಿನವೂ ಯುಗಾದಿಯೇ ಆಗುತ್ತೆಂದು ತಿಳಿದುಬರುತ್ತದೆ. ಅಂದೇ ಶ್ರೀ ರಾಮಚಂದ್ರನಿಗೆ ಪಟ್ಟಾಭಿಷೇಕ ನಡೆದಿರುವುದೆಂದು ಹೇಳಲಾಗಿದೆ. ದ್ವಾಪರ ಯುಗದ ಶ್ರೀ ಕೃಷ್ಣನು ನೃಪಕೇತುವಿಗೆ ದರ್ಶನ ನೀಡಿದ್ದು ವಿಕೃತಿ ನಾಮ ಸಂವತ್ಸರದ ಯುಗಾದಿಯಂದೇ.

ಇನ್ನು ಹಿಂದೂಸ್ಥಾನದ ಇತಿಹಾಸ ಕಾಲಕ್ಕೆ ಬಂದರೆ ಭರತಖಂಡವನ್ನಾಳಿದ ಶಾಲೀವಾಹನ ರಾಜನ ಹೆಸರು ಇತಿಹಾಸ ಪ್ರಸಿದ್ಧವಾಗಿದೆ. ಶಕರು ಶಾಲೀವಾಹನನ ರಾಜ್ಯದ ಮೇಲೆ ದಾಳಿ ಮಾಡಿದಾಗ ಶಾಲೀವಾಹನನು ಅವರನ್ನು ಸೋಲಿಸಿ ಓಡಿಸಿದ ದಿನವೂ ಯುಗಾದಿಯೇ ಆಗಿತ್ತು. ಆದ್ದರಿಂದ ಅವನು ತನ್ನ ವಿಜಯೋತ್ಸವವನ್ನು ಅಂದೇ ಆಚರಿಸಿದ್ದರಿಂದ ಆ ದಿನವನ್ನು ಶಾಲಿವಾಹನ ಶಕೆಯ ಆರಂಭದ ದಿನ ಎಂದು ಇತಿಹಾಸ ತಿಳಿಸುತ್ತದೆ. ಈ ಸಂಭ್ರಮದಿಂದಾಗಿ ಅವನು ಶಕಪುರುಷನೆನಿಸಿಕೊಂಡ. ಅದೇ ರೀತಿ ಹೂಣರನ್ನು ಶಕರು ಸೋಲಿಸಿದ್ದು ಕೂಡಾ ಯುಗಾದಿಯಂದೇ. ಆದಿ ತೀರ್ಥಂಕರರ ಮಗ ಭರತ ಚಕ್ರವರ್ತಿಯು ದಿಗ್ವಿಜಯ ಪಡೆದ ದಿನ ಮತ್ತು ಜೈನರ 19ನೇ ತೀರ್ಥಂಕರ ಮಲ್ಲಿನಾಥ ಹುಟ್ಟಿದ ದಿನವೂ ಯುಗಾದಿಯಂದೇ. ಇಪ್ಪತ್ನಾಲ್ಕನೆಯ ತೀರ್ಥಂಕರ ಮಹಾವೀರ ಜನಿಸಿದ್ದು ಯುಗಾದಿಯಂದೇ. ಈ ಎಲ್ಲಾ ಕಾರಣಗಳಿಂದಾಗಿ ನಮ್ಮ ಪಂಚಾಂಗಗಳಲ್ಲಿ ಶಾಲಿವಾಹನ ಶಕೆ, ವಿಕ್ರಮ ಶಕೆ, ಮಹಾವೀರನಿಂದ ಆರಂಭವಾದ ಮಹಾವೀರ ಶಕೆಗಳ ವರ್ಷಗಳು ನಮೂದಿಸಲ್ಪಡುವುದನ್ನು ಕಾಣಬಹುದು.

ಯುಗಾದಿ ಎಂದೊಡನೆ ಹೊಸ ಸಂವತ್ಸರ, ಹೊಸ ಪಂಚಾಂಗ, ಪಂಚಾಂಗ ಪೂಜೆ, ಪಂಚಾಂಗ ಶ್ರವಣ ಪ್ರಾಮುಖ್ಯತೆ ಪಡೆಯುತ್ತವೆ. ಪಂಚಾಂಗ ಎಂದರೆ ತಿಥಿ, ವಾರ, ನಕ್ಷತ್ರ, ಕರಣ ಮತ್ತು ಯೋಗಗಳ ವಾಚನ ಮತ್ತು ಶ್ರವಣ. ಅಷ್ಟೇ ಅಲ್ಲ ಯುಗಾದಿಯಂದು ಆಚರಿಸಬೇಕಾದ ಕೆಲವು ಕರ್ತವ್ಯಗಳನ್ನು ನಮ್ಮ ಪೂರ್ವಿಕರೂ, ಶಾಸ್ತ್ರಕಾರರೂ ತಿಳಿಸಿದ್ದಾರೆ. ಅಂದು ಶ್ರೀರಾಮ ಜನಿಸಿದ ದಿನವಾದ್ದರಿಂದ ಮುಂಜಾನೆ ಅವನನ್ನು ಪ್ರಾರ್ಥಿಸಿ, ಹಿರಿಯರು ಕಿರಿಯರನ್ನು ದೇವರ ಮುಂದೆ ಕೂರಿಸಿ ಎಣ್ಣೆ ಹಚ್ಚಿ ಅಭ್ಯಂಗ ಸ್ನಾನ ಮಾಡಿಸಬೇಕು. ಮಿಂದು ಹೊಸ ಬಟ್ಟೆ ಧರಿಸಿ ದೇವರಿಗೂ, ಗುರು–ಹಿರಿಯರಿಗೂ ನಮಸ್ಕರಿಸಿ ಆಶೀರ್ವಾದ ಪಡೆಯಬೇಕು. ಅನಂತರ ಇಷ್ಟದೇವರ ಪೂಜೆ ಮಾಡಿ, ಪಂಚಾಂಗ ಪೂಜೆ ಮಾಡಬೇಕು. ಮನೆಯ ಹಿರಿಯ ವ್ಯಕ್ತಿ ಪಂಚಾಂಗ ಪೂಜೆ ಮಾಡಿ ಪಂಚಾಂಗ ವಾಚನ ಮಾಡಬೇಕು. ಉಳಿದ ಮನೆಮಂದಿ ಪಂಚಾಂಗ ಶ್ರವಣ ಮಾಡಿ ಯುಗಾದಿಯ ಬೇವು ಬೆಲ್ಲ ಸೇವಿಸಬೇಕು. ಯುಗಾದಿಯಂದು ಬೇವು ಬೆಲ್ಲ ಸೇವಿಸುವುದು ಆರೋಗ್ಯಕ್ಕೆ ಸಹಕಾರಿ. ಬೇವು ಬೆಲ್ಲ ಸೇವಿಸುವಾಗ

*“ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ಸರ್ವಾರಿಷ್ಟ ವಿನಾಶಾಯ ನಿಂಬಕಂ ದಳ ಭಕ್ಷಣಂ”*

ಎಂಬ ಮಂತ್ರವನ್ನು ಪಠಿಸಬೇಕು. ಬೇವಿನ ಎಲೆ ರೋಗ ನಿರೋಧಕವೆಂದು ವೈಜ್ಞಾನಿಕವಾಗಿಯೂ ದೃಢೀಕರಿಸಲ್ಪಟ್ಟಿದೆ. ಬೇವು ಸೇವಿಸುವುದರಿಂದ ವಜ್ರಕಾಯಿಯಾಗಿ ದೀರ್ಘಕಾಲ ಬಾಳುತ್ತಾನೆ. ಸರ್ವ ರೋಗಗಳೂ ನಿವಾರಣೆಯಾಗಿ ಆಯುರಾರೋಗ್ಯ ಭಾಗ್ಯ ದೊರೆಯುತ್ತದೆ. ಅದರಕ್ಕೆ ಕಹಿಯಾದುದು ಉದರಕ್ಕೆ ಸಿಹಿ ಎಂಬಂತೆ ಬೇವು ನಾಲಿಗೆಗೆ ಕಹಿಯಾದರೂ ದೇಹಕ್ಕೆ ಬಲುಸಿಹಿ. ಬೆಲ್ಲದೊಂದಿಗೆ ಬೇವಿನ ಎಲೆಗಳನ್ನು ತಿನ್ನುವುದರಿಂದ ಜೀವನದಲ್ಲಿ ಕಹಿಯನ್ನು ನುಂಗಿ ಸಿಹಿಯಾದ, ಸವಿಯಾದ ನಗು ನಗುತ್ತಾ ಜೀವಿಸಬೇಕೆಂಬುದೇ ಬೇವು ಬೆಲ್ಲದ ಸಂಕೇತ. ಬೇವಿನ ಪ್ರತಿ ಭಾಗವೂ ರೋಗ ನಿವಾರಕ. ಹೂವು ಕರುಳು ಕ್ರಿಮಿರೋಗ ನಾಶಕವಾಗಿದೆ.

ಭಾರತದಲ್ಲಿ ಯುಗಾದಿಯನ್ನು ಒಂದೊಂದು ಪ್ರದೇಶಗಳಲ್ಲಿ ಒಂದೊಂದು ರೀತಿಯಲ್ಲಿ ಆಚರಿಸುವುದು ಸಂಪ್ರದಾಯ. ಯುಗಾದಿಯನ್ನು ಚಾಂದ್ರಮಾನ ಮತ್ತು ಸೌರಮಾನ ಯುಗಾದಿ ಎಂದು ಎರಡು ವಿಧದಲ್ಲಿ ಆಚರಿಸುವುದು ಕಂಡುಬರುತ್ತದೆ. ಮಹಾರಾಷ್ಟ್ರದಲ್ಲಿ ಗುಡಿಪಾಡವ ಎಂದು ಆಚರಿಸಿದರೆ, ಬಂಗಾಳದಲ್ಲಿ ಬಸುತ್ ಪಂಚಮಿ ಎಂದು ಸಡಗರದಿಂದ ಆಚರಿಸುತ್ತಾರೆ. ಐದು ದಿನಗಳ ಕಾಲ ಮನೆ ಮನೆಗಳಲ್ಲೆ ಹಬ್ಬದ ವಾತಾವರಣವಿರುತ್ತದೆ. ಪಂಜಾಬ್‌ನಲ್ಲಿ ಯುಗಾದಿಯನ್ನು ಬೈಸಾಕಿ ಎಂದು ಆಚರಿಸುವುದು, ಅಸ್ಸಾಂನಲ್ಲಿ ಬಿಹು ಹಬ್ಬವೆಂದು ಹೆಂಗಳೆಯರು ಹಾಡಿ ನಲಿದು ಆಚರಿಸುತ್ತಾರೆ. ಕೇರಳದಲ್ಲಿ ಸೌರಮಾನ ಯುಗಾದಿಯನ್ನು ವಿಷುಹಬ್ಬವೆಂದು ಆಚರಿಸುತ್ತಾರೆ.

ತಮಿಳುನಾಡಿನಲ್ಲಿ ಸೌರಮಾನ ಯುಗಾದಿ ರೂಢಿಯಲ್ಲಿದೆ. ಹಾಗೇ ಕರ್ನಾಟಕದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ತುಳು ಸಂಸ್ಕೃತಿ ಅಳವಡಿಸಿಕೊಂಡವರು ಸೌರಮಾನ ಯುಗಾದಿಯನ್ನೂ, ಇತರರು ಚಾಂದ್ರಮಾನ ಯುಗಾದಿಯನ್ನೂ ಆಚರಿಸುವುದು ಕಂಡುಬರುತ್ತದೆ. ಕರ್ನಾಟಕ ರಾಜ್ಯದ ಮಲೆನಾಡು ಮತ್ತು ಬಯಲುಸೀಮೆಯಲ್ಲಿ ಚಾಂದ್ರಮಾನ ಯುಗಾದಿಯನ್ನು ಸಂಭ್ರಮದಿಂದ ಮೂರು ದಿನ ಆಚರಿಸುತ್ತಾರೆ. ಚೈತ್ರ ಪಾಡ್ಯದಂದು ಮಿಂದು ಮಡಿಯುಟ್ಟು ದೇವರ ಮುಂದೆ ಹೂ, ಫಲ, ತಾಂಬೂಲಾದಿಗಳನ್ನಿಟ್ಟು ದೊಡ್ಡ ಹರಿವಾಣದಲ್ಲಿಟ್ಟ ಕಾಡು ಗೇರುಬೀಜವನ್ನು ಕಡ್ಡಿಯಲ್ಲಿ ಚುಚ್ಚಿ ಅದರ ಎಣ್ಣೆಯನ್ನು ಹಣೆಗಿಟ್ಟುಕೊಳ್ಳುತ್ತಾರೆ. ಮರುದಿನ ಗೇರೆಣ್ಣೆ ಇಟ್ಟ ಜಾಗದ ಚರ್ಮ ಸುಟ್ಟುಹೋಗಿರುತ್ತದೆ. ಹಳೆಯದನ್ನು ಸುಟ್ಟು ಹೊಸ ಚರ್ಮ ಕಂಡು ಬರುತ್ತದೆ. ಇದರ ಅರ್ಥ ಹಳೆ ನೋವ ಮರೆಸಿ ಹೊಸತನಕ್ಕೆ ದಾರಿ ಮಾಡಿಕೊಡುವುದು.

ಶ್ರದ್ಧಾಭಕ್ತಿಯಿಂದ ಯುಗಾದಿ ಹಬ್ಬದ ಹಿಂದಿನ ದಿನವೇ ಮನೆ ಮುಂದಿನ ಅಂಗಳವನ್ನು ಸಗಣಿ ಗುಡಿಸಿ, ಬಾಗಿಲಿಗೆ ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ದೇವರ ಕೋಣೆ ಮತ್ತು ಮುಂಬಾಗಿಲ ಅಂಗಳದಲ್ಲಿ ವರ್ಣರಂಜಿತ ರಂಗವಲ್ಲಿ ಇಡುತ್ತಾರೆ. ದೇವರ ಪೂಜೆ ಮಾಡಿ ಹೊಸ ಬಟ್ಟೆ ಧರಿಸಿ, ನೆಂಟರಿಷ್ಟರ ಮನೆಗೆ ಹೋಗಿ ಬೇವು ಬೆಲ್ಲ ಹಂಚಿ, ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಬೇಡುತ್ತಾರೆ. ಅಂದಿನ ಊಟಕ್ಕೆ ವಿಶಿಷ್ಟ ತಿನಿಸುಗಳನ್ನು ತಯಾರಿಸುತ್ತಾರೆ. ಕಡಲೆ ಬೇಳೆ, ಹೋಳಿಗೆ, ಕಡುಬು, ಪಾಯಸ, ಕೋಸುಂಬರಿ, ಮಾವಿನ ಹಣ್ಣಿನ ತಿನಿಸುಗಳು ಪ್ರಧಾನವಾಗಿರುತ್ತವೆ. ಹಬ್ಬಗಳ ಆಚರಣೆಗೆ ನಾಂದಿ ಹಾಡುವ ಮೊದಲ ಹಬ್ಬ ಯುಗಾದಿಯಾದ್ದರಿಂದ ಎಲ್ಲೆಲ್ಲೂ ಸಂಭ್ರಮದ ಅಲೆ ಬೀಸುತ್ತದೆ.

“ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ....ಹೊಸ ವರುಷಕೆ ಹೊಸ ಹರುಷವ ಮರಳಿ ಮರಳಿ ತರುತಿದೆ...” ಎಂಬ ವರಕವಿ ದ.ರಾ.ಬೇಂದ್ರೆಯವರ ಕವಿವಾಣಿಯಂತೆ ಪ್ರತಿ ವರುಷವೂ ಯುಗಾದಿಯು ಹೊಸ ವರುಷವಾಗಿ ಮೂಡಿಬರುತ್ತಿದೆ. ರಸಋಷಿ ಕುವೆಂಪುರವರು *“ಜೀವನವೆಲ್ಲ ಬೇವುಬೆಲ್ಲ/ ಎರಡೂ ಸವಿದವನೇ ಕಲಿ ಮಲ್ಲ/”* ಎಂದು ಯುಗಾದಿಯ ಸಿಹಿ ಕಹಿ ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂದು ಸೂಚ್ಯವಾಗಿ ತಿಳಿಸಿದ್ದಾರೆ. ಆನಂದ ಕಂದರು *“ನಿನ್ನೆಗಳನು ನೆಲಕೆ ಮೆಟ್ಟಿ/ ನಾಳೆಗಳನು ತಲೆಗೆ ಕಟ್ಟಿ/ ಕುಣಿದು ಹಾಡಿ ಕೈಯ ತಟ್ಟಿ/ ಬಂದಿತಿಂದು ಹೊಸದಿನ”* ಎಂದು ಹೊಸದಿನದ ಹೊಸತನವನ್ನು ಸ್ವಾಗತಿಸಿದ್ದಾರೆ.

ಹಿಂದಿನ ವರ್ಷದ ಫಾಲ್ಗುಣದ ಹುಣ್ಣಿಮೆಯಂದು ಹೋಳಿಯ ರಂಗಿನೋಕುಳಿಯಿಂದ ರಂಗಾಗಿ ಕಾಮದಹನದ ಬೂದಿಯಿಂದ ಹೊಸವರುಷದ ಚೂತವನ ಚೈತ್ರವು ಚಿಗುರುತ್ತದೆ. ವಸಂತರಾಜನ ಆಗಮನವನ್ನು ಆದಿಕವಿ ಪಂಪನಿಂದ ಕುವೆಂಪುವರೆಗೆ ಎಲ್ಲರೂ ವಿಧ ವಿಧವಾಗಿ ವರ್ಣಿಸಿದ್ದಾರೆ. ವಸಂತ *“ಬಂದ ಋತುಗಳ ರಾಜ ತಾ ಬಂದ”* ಎಂದು ವಸಂತ ಮಾಸಕ್ಕೊಂದು ವಿಶೇಷ ಗೌರವ ನೀಡಿದ್ದಾರೆ. ಯುಗಾದಿ ಬಂತೆಂದರೆ ಕೋಗಿಲೆಗಳು ಹೊಸ ಗೀತೆ ಹಾಡುತ್ತವೆ, ದುಂಬಿಗಳ ಝೇಂಕಾರ, ಮಾಮರಗಳು ತಳಿರು ತೋರಣ ಕಟ್ಟಿ ವಸಂತನಿಗೆ ಸ್ವಾಗತ ತೋರುತ್ತವೆ.

ನವಿಲು ಹಿಂಡು ಹಿಂಡಾಗಿ ಸೇರಿ ಗರಿಬಿಚ್ಚಿ ಕುಣಿದರೆ ಕೊಳದ ಕೆಂದಾವರೆ ರವಿಯ ಮೊದಲ ಕಿರಣ ಸ್ಪರ್ಶದೊಂದಿಗೆ ಅರಳುವ ಪರಿ ಎಂತಹ ಅರಸಿಕರನ್ನೂ ನಿಂತು ನೋಡುವಂತೆ ಮಾಡುತ್ತದೆ. ಜೊಂಪೆ ಜೊಂಪೆ ಹೂಗಳನ್ನರಳಿಸಿಕೊಂಡ ಹೊಂಗೆ ಮರದ ಬಳಿ ಹೋದರೆ ಹೂವಿನ ಮಕರಂದ ಹೀರಲು ಗುಂಪು ಗುಂಪಾಗಿ ಹಾಡುತ್ತಾ ಹಾರುವ ಜೇನು ಹುಳಗಳೂ, ಭೃಂಗ ಸಂಗಾತಿಗಳೂ ಹಾಡುವ ಸಂಗೀತ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಜಿಗಿದಾಡುವ ಜಿಂಕೆಗಳು, ಕುಕಿಲಿಡುವ ಕೋಗಿಲೆಗಳು, ಹಾರಾಡುವ ಗಿಳಿಗಳು ಮನಕ್ಕೆ ಮುದ ನೀಡುತ್ತವೆ. ಇಡೀ ನಿಸರ್ಗವೇ ಸ್ವರ್ಗವಾಗಿ ಕಂಗೊಳಿಸುತ್ತದೆ ಯುಗಾದಿಯಲ್ಲಿ. ಮಾವು, ಹಲಸಿನ ಹಣ್ಣುಗಳು ಯುಗಾದಿಗೆ ಪ್ರಕೃತಿ ಮಾತೆ ನೀಡುವ ರಸದೌತಣವೇ ಸರಿ. ಬನದ ತುಂಬಾ ಮಲ್ಲಿಗೆಯ ಕಂಪು. ಹೇಮಂತ, ಶಿಶಿರಗಳ ಕೊರೆವ ಚಳಿಗೆ ಒಡಲೆಲ್ಲಾ ತರಗುಟ್ಟಿ, ಮರಗಟ್ಟಿಸಿದ ಕುಳಿರ್ಗಾಳಿಗೆ ಎಲೆಗಳನ್ನೆಲ್ಲಾ ಉದುರಿಸಿಕೊಂಡು ಬೋಳಾದ ಮರಗಳು, ಚೈತ್ರಾಗಮನದೊಂದಿಗೆ ನರನಾಡಿಗಳಲ್ಲಿ ಉತ್ಸಾಹ ತುಂಬಿಕೊಂಡು ನಗುವ ಸಂಭ್ರಮ ಕಂಡೇ ಕವಿ ಅಂಬಿಕಾತನಯದತ್ತರು ತಮ್ಮ ‘ಯುಗಾದಿ’ ಎಂಬ ಕವನದಲ್ಲಿ ‘ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ’ ಎಂದು ಹಾಡಿದ್ದಾರೆ. ಯುಗಾದಿಯ ಚೈತ್ರಮಾಸದಲ್ಲಿ ಪ್ರಕೃತಿ ಮಾತೆಯ ಅಡಿಯಿಂದ ಮುಡಿಯವರೆಗೂ ಸೊಬಗಿನ ಸೋನೆ ಹರಿಯುತ್ತದೆ. ಸ್ಫೂರ್ತಿಯ ಚಿಲುಮೆ ಉಕ್ಕುತ್ತದೆ, ಸಂಭ್ರಮದ ಸವಿಜೇನ ಮಳೆಗರೆಯುತ್ತದೆ. ಗಿಡ ಮರ ಬಳ್ಳಿ ಚಿಗುರುವುದು, ವರ್ಷವಿಡೀ ಕಾದು ಕುಳಿತ ಮಾವು ಹೂಬಿಟ್ಟು ಮಿಡಿಯಾಗಿ, ಹಣ್ಣಾಗಿ ಮಾಗುವುದು ಕಂಡು ಮಾನವರು ಮೂಕವಿಸ್ಮಿತರಾಗುವುದು ಸಹಜ. ಇಡೀ ಪ್ರಕೃತಿಯೇ ಮಾನವನಿಗೊಂದು ಪಾಠಶಾಲೆ.

ಕಣ್ಣು ಮುಚ್ಚಿ ಕುಳಿತರೆ ನನ್ನ ಬಾಲ್ಯದ ಯುಗಾದಿಯ ಆ ದಿನಗಳ ಚಿತ್ರಗಳು ಒಂದೊಂದಾಗಿ ಬಂದು ಮೇಳೈಸುತ್ತವೆ. ಅಮ್ಮನ ಸಡಗರ, ಅಪ್ಪನ ಕಂಚಿನ ಕಂಠದ ಮಂತ್ರೋಚ್ಛಾರ, ನಾವೆಲ್ಲಾ ಹೊಸ ಬಟ್ಟೆ ತೊಟ್ಟು ಬೇವು ಬೆಲ್ಲ ತಿಂದು, ಅಪ್ಪ ಪೂಜೆಯ ನಂತರ ಓದುವ ಪಂಚಾಂಗ ಶ್ರವಣ ಮತ್ತೆ ಊಟದ ಮನೆಯಲ್ಲಿ ನೆಲದಲ್ಲಿ ಸಾಲಾಗಿ ಇರಿಸಿದ ಕುಡಿಬಾಳೆ, ಎಲೆಯಲ್ಲಿ ಅಕ್ಕತಂಗಿಯರು ಒಂದೊಂದು ಬಗೆ ಅಡುಗೆಯನ್ನು ಕ್ರಮ ಪ್ರಕಾರ ಬಡಿಸುವುದು, ಮೊದಲಿಗೆ ಎಲೆಯ ಬಲಬದಿಯಲ್ಲಿ ಕೆಳಗಡೆ ಸ್ವಲ್ಪ ಪಾಯಸ ಅಮ್ಮನೇ ಬಡಿಸುವುದು. ನಂತರ ನಾವು ಎಲೆಯ ಮೇಲ್ಭಾಗದಲ್ಲಿ ಉಪ್ಪಿಗಾಗಿ ಜಾಗ ಬಿಟ್ಟು ಉಪ್ಪಿನಕಾಯಿ, ಚಟ್ನಿ, ಕೋಸುಂಬರಿ, ಪಲ್ಯಗಳನ್ನು ಬಡಿಸುವುದು. ಅಕ್ಕ ಅನ್ನ ಬಡಿಸಿದ ನಂತರ ಅಮ್ಮ ಘಮ್ಮೆನ್ನುವ ತುಪ್ಪ ಬಡಿಸುವುದು. ಕೊನೆಗೆ ಎಲೆಯ ಮೊದಲ ತುದಿಯಲ್ಲಿ ಉಪ್ಪು ಬಡಿಸಿ ನಾವೆಲ್ಲಾ ಊಟಕ್ಕೆ ಕುಳಿತುಕೊಳ್ಳುವುದು. ಅಣ್ಣ, ಅಪ್ಪ ಬಡಿಸುವ ಕೆಲಸಕ್ಕೆ ಬರುತ್ತಿರಲಿಲ್ಲ. ಅಪ್ಪ ಕೃಷ್ಣಾರ್ಪಣ ಅಂತ ದೂರದಲ್ಲಿಟ್ಟು ಬಡಿಸಿದ ಒಂದು ಎಲೆ ಗೋ ಗ್ರಾಸಕ್ಕೆ ಒಂದು ಉದ್ಧರಣೆ ನೀರು ಹಾಕಿದ ಮೇಲೆ ಎಲ್ಲರೂ ಅನ್ನಪೂರ್ಣೇ ಸದಾಪೂರ್ಣೇ ಶ್ಲೋಕ ಹೇಳಿ ಊಟ ಆರಂಭಿಸುತ್ತಿದ್ದೆವು. ಊಟದ ನಂತರ ಅಪ್ಪ ದೇವಸ್ಥಾನಕ್ಕೆ ಪಂಚಾಂಗ ಶ್ರವಣಕ್ಕೆ ಹೋಗುತ್ತಿದ್ದರು.

ಇಂದು ಹೇಮಲಂಬಿ ಅಥವಾ ಹೇವಿಳಂಬಿ ಸಂವತ್ಸರದ ಮೊದಲದಿನ ಯುಗಾದಿ. ಇಂದು ಅಂದಿನ ಸಂಭ್ರಮ ಕಂಡು ಬರುತ್ತಿಲ್ಲ. ಇದಕ್ಕೆ ಹತ್ತು ಹಲವು ಕಾರಣಗಳಿವೆ. ಆಧುನಿಕ ಜಗತ್ತಿನ ಜೊತೆ ನಾವೂ ಆಧುನಿಕರಾಗುತ್ತಿದ್ದೇವೆ. ಮನೆಯ ಹೊರಗೆ ಪ್ರಕೃತಿ ಸೌಂದರ್ಯ ಕಂಗೊಳಿಸುತ್ತಿಲ್ಲ. ನಮ್ಮ ಫ್ರಿಜ್, ಕಾರ್ಖಾನೆಗಳ ಬಿಸಿಯಿಂದಾಗಿ ವಾತಾವರಣ ಬಿಸಿಯಾಗಿದೆ. ಕುಡಿಯುವ ನೀರಿನ ಕೆರೆಗಳು ಕಾಂಕ್ರೀಟ್ ಕಟ್ಟಡಗಳಾಗಿವೆ. ಕಾಡಿನಲ್ಲಿ ಬೆಳೆಯುತ್ತಿದ್ದ ಹಲಸು ಹೆಬ್ಬಲಸಿನ ಮರಗಳು ಮರದ ವ್ಯಾಪಾರಿಗಳ ಪಾಲಾಗಿ ಕಾಡು ತುಂಬಾ ರಸಹೀನ ಅಕೇಶಿಯ ಸಸ್ಯಗಳು. ಹಕ್ಕಿಗಳಿಗೆ ಗೂಡು ಕಟ್ಟಲು ಅವಕಾಶವಿಲ್ಲದ ಅಕೇಶಿಯ ಕಾಡಿನಿಂದಾಗಿ ನೆಲದ ಫಲವತ್ತತೆ ಕುಂದಿದೆ. ಹಸುಗಳಿಗೆ ಹುಲ್ಲಿಲ್ಲ–ಮೇಯಲು ಗೋಮಾಳಗಳಿಲ್ಲ. ಅಂದ ಮೇಲೆ ಕಾಡಿನ ಪ್ರಾಣಿಗಳು ಊರಿನ ಮನೆ ಮನೆಗೆ ನುಗ್ಗಿದರೆ ಯಾರನ್ನು ದೂರಬೇಕು. ಆದ್ದರಿಂದ ಈ ಯುಗಾದಿಯ ಶುಭದಿನ ನಾವೆಲ್ಲ ಸಂಕಲ್ಪ ಮಾಡೋಣ ನಮ್ಮ ಪರಿಸರ ಹಸಿರಾಗಿಸೋಣ, ಸುಸಂಸ್ಕೃತ ಜೀವನ ನಡೆಸೋಣ. ಹಿಂದೂ ಧರ್ಮದ ಸೂಕ್ತಿ ವಸುದೈವ ಕುಟುಂಬದ ಆದರ್ಶ ಮೆರೆಯೋಣ. ಸರ್ವೇಜನಾಃ ಸುಖಿನೋ ಭವಂತು ಎಂಬಂತೆ ಸರ್ವರ ಹಿತ ಬಯಸೋಣ. ಎಲ್ಲರಿಗೂ ಯುಗಾದಿಯು ಸನ್ಮಂಗಳವನ್ನುಂಟು ಮಾಡಲಿ. ಹೊಸ ವರುಷ ಹೊಸ ಹರುಷ ತರಲಿ.


## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೊಲ್ಲೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ

# ಹೀಗೊಂದು ಪಯಣ ಮುರ್ಡೇಶ್ವರದತ್ತ.......

-ರಮ್ಯ ಅರುಣ್ ರಾವ್
ಕಾರ್ಯದರ್ಶಿ, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರಿ

ನೆನಪುಗಳ ಲೋಕಕ್ಕೆ ಸಾಟಿಯಿಲ್ಲ, ನೆನಪೇ ಒಂದು ವಿಸ್ಮಯ..... ಅದರ ಆಳ ಬಹುದೂರ....ಮೊಗೆದಷ್ಟು ಹೆಚ್ಚುವುದು ನೆನಪೆಂಬ ನೌಕೆ. ಅಂತರಾಳದಲ್ಲಿನ ನೆನಪೊಂದು ಹೊರ ಹೊಮ್ಮಿದಾಗ ಅದು ತಾಳುವ ರೂಪವೆ ಬರಹ.....!

ಅಷ್ಟಕ್ಕೂ ನಾವು ಹೇಳಹೊರಟಿರುವ ನಮ್ಮ ಸುಂದರ ನೆನಪಿನ ಬುತ್ತಿ ಯಾವುದೆಂದರೆ "ಮುರ್ಡೇಶ್ವರ ಪಯಣದ" ನೆನಪಿನ ತುತ್ತನ್ನು. ಹೌದು, ಅಂದು ಜನವರಿ 22, 2017ರ ದಿನಾಂಕ ಎಷ್ಟೊಂದು ಸಂತಸವೆಂದರೆ ಯಾವುದೇ ವಿಚಾರಕ್ಕೂ ನಗುವೊಂದೇ ಉತ್ತರವಾಗಿತ್ತು. ಕಾರಣ ನಾವಂದು ನಮ್ಮ ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರಿಯಿಂದ ನಮ್ಮ ಅಧ್ಯಕ್ಷರಾದ ಶ್ರೀ ಎಂ.ಕೆ. ಮೋಹನ್ ರಾವ್ ಅವರ ಮಾರ್ಗದರ್ಶನದಲ್ಲಿ ಸರಿ ಸುಮಾರು 55-60 ಜನ ಮುರ್ಡೇಶ್ವರಕ್ಕೆ ಹೋಗಲಿದ್ದೆವು. ಅಂದು ಮುಂಜಾನೆ ಘಂಟೆ 7-00ಕ್ಕೆ ಗೋವಾ-ಮಡ್ಗಾಂವ್ ರೈಲು ಹಿಡಿಯಲೆಂದು ನಂದಿಕೂರು ರೈಲ್ವೆ ಸ್ಟೇಷನ್‌ಗೆ ಪಲಿಮಾರಿನಿಂದ 8-10 ಗಾಡಿಗಳಲ್ಲಿ ನಾವು ಬಂದ ರೀತಿ ಹೇಗಿತ್ತೆಂದರೆ.... ಒಬ್ಬ ಹೆಸರಾಂತ ಸ್ವಾಮಿಗಳು ಮೆರವಣಿಗೆಯಲ್ಲಿ ಬಂದ ರೀತಿಯ ಅಬ್ಬರ. ಅಂತೂ ಇಂತೂ ಮಡ್ಗಾಂವ್ ಪ್ಯಾಸೆಂಜರ್ ಕಾದಿರಿಸಿದಂತೆ ನಮ್ಮೆಲ್ಲರನ್ನು ಪ್ರೀತಿಯಿಂದ ಆಹ್ವಾನಿಸಿತು. ರೈಲು ಹತ್ತಿದ್ದೇ ತಡ ಹಾಡು-ಹರಟೆ, ಮಾತು-ನಗು, ಆಡದ ಮಾತುಗಳಿಲ್ಲ, ಹೇಳದ ತಮಾಷೆಗಳಿಲ್ಲ, ಯಾರ್‍ಯಾರದ್ದೋ ಡೈಲಾಗ್ ಹೇಳಿ ನಕ್ಕಿದ್ದೇ ನಕ್ಕಿದ್ದು. ನಮ್ಮ ನಗೆ ಚಟಾಕಿಗೆ ಉಳಿದ ರೈಲು ಪ್ರಯಾಣಿಕರೂ ನಮ್ಮೊಂದಿಗೆ ಸೇರಿ ನಕ್ಕಿದ್ದೇ. ಅಂತೂ ಪ್ರಯಾಣದ ತುಂಬಾ ನಗೆಚಟಾಕಿ. ನಮಗೂ ನಿದ್ದೆ ಮಾಡಲು ಮನಸ್ಸಿಲ್ಲ ಬೇರೆಯವರನ್ನೂ ನಿದ್ದೆ ಮಾಡಲು ಬಿಡುತ್ತಿರಲಿಲ್ಲ. ಎಲ್ಲರೂ ಸೇರಿ ಹರಟಿದ್ದೋ... ಹರಟಿದ್ದು. ಅಬ್ಬಾ.... ರೈಲಿನ ಶಬ್ದಕ್ಕಿಂತ ನಮ್ಮ ಶಬ್ದವೇ ಜೋರಾಗಿತ್ತು. ನಿಜವಾಗಿಯೂ ಆ ಕ್ಷಣ ಇನ್ನು ಕೂಡಾ ಕಣ್ಣ ಮುಂದೆ ಸಾಗುತ್ತಿದೆ. ಎರಡೂವರೆ ಘಂಟೆ ರೈಲಿನಲ್ಲಿ ಸಾಗಿದ್ದೇ ಗೊತ್ತಾಗಲಿಲ್ಲ. ಅಂತಹ ಮೋಜಿನ ಆಟವೇ ನಡೆದಿತ್ತು.

ಅಂತೂ ಸರಿ-ಸುಮಾರು ಹತ್ತು ಘಂಟೆ ಹೊತ್ತಿಗೆ ಮುರ್ಡೇಶ್ವರ ರೈಲು ನಿಲ್ದಾಣಕ್ಕೆ ಬಂದು ಬಿಟ್ಟೆವು. ಅಲ್ಲಿಯೇ ಲಘು ಉಪಹಾರ ಮಾಡಿ, ಅಲ್ಲಿಂದ ಎರಡು ಟೂರಿಸ್ಟ್ ವ್ಯಾನ್‌ಗಳಲ್ಲಿ ಮುರ್ಡೇಶ್ವರ ದೇವಸ್ಥಾನಕ್ಕೆ ಬಂದೆವು. ಗಾಡಿಯಿಂದ ಇಳಿಯುತ್ತಿದ್ದಂತೆ, ನೆತ್ತಿಯ ಮೇಲೇರಿನಿಂತಿದ್ದ 'ರವಿರಾಜ'ನ ಸುಡು ಕೆಂಡಗಳ ಉರಿ ಬಿಸಿಲು ನಮ್ಮ ಮೇಲೆ, ಮೊದಲೇ ಸಣ್ಣ-ಪುಟ್ಟ ಬ್ಯಾಗುಗಳು ನಮ್ಮ ಹೆಗಲ-ಬೆನ್ನು ಮೇಲೆ, ಹಾಗೂ ಮಾತೆಯರ ಸೊಂಟದಲ್ಲಿ-ಕೈಯಲ್ಲಿ ಎಂಬಂತೆ ಮಕ್ಕಳು ಆದರೂ..... ಕಾಣದೆ, ಸಂತಸ ಸಂಭ್ರಮ ನಮ್ಮ ನಡಿಗೆಯಲ್ಲಿ ತುಂಬಿತ್ತು ಹಾದಿಯಲ್ಲಿ ಸಾಗುತ್ತಿದ್ದಂತೆ ಒಮ್ಮೆ ತಲೆ ಎತ್ತಿ ನೋಡುವಂತಾಯಿತು..... ನಿಜವಾಗಿಯೂ ಸಂತಸಕ್ಕೆ ಪಾರವೇ ಇರಲಿಲ್ಲ.... ಸ್ವಾಗತ ಕೋರುತ್ತಿತ್ತು 'ಮಹಾದ್ವಾರ', ಮುಂದೆ ನಡೆಯುತ್ತಿದ್ದಂತೆ ಕಣ್ಣಿಗೆ ಕುಟುಕುವಂತೆ ಕಾಣುವ ಎತ್ತರಕ್ಕೆ ಸೆಟೆದು ನಿಂತಿರುವ 'ರಾಜ ಗೋಪುರ'. ಮುಂದೆ ಹೋದಂತೆಲ್ಲ ಹೊಸತನ, ಹೊಸ ಅನುಭವ. ಮುಂದೆ ದೇವರ ದರ್ಶನ ಮಾಡಿ, ದೇವರ ಪ್ರಸಾದ ಸ್ವೀಕರಿಸಿ, ಒಂದು ಕ್ಷಣ ಎಲ್ಲರೂ ಹೊರಗೆ ಬಂದು ಕುಳಿತೆವು.

ಮುಂದೆ ಎಲ್ಲರೊಡಗೂಡಿ ಬಳಿ ಇರುವ ಶಿವಗೋಪುರ ಹಾಗೂ ಸುತ್ತಲಿರುವ ತಾಣಗಳನ್ನು ವೀಕ್ಷಿಸಲು ಮುಂದೆ ಸಾಗಿದೆವು. ನಮ್ಮ ಊಹೆಗೂ ನಿಲುಕದಂತೆ ಸುಂದರ ವೈಕಾಂತಿಯುನ್ನು ತಳೆದು, ನಾವೆಲ್ಲ ನೋಡಿದಾಗ ತಲೆಬಾಗಬೇಕು, ಎಂದೆನಿಸುವಂತೆ ತಲೆ ಎತ್ತಿ ನಿಂತಿರುವ ಈಶ್ವರನ ಪ್ರತಿಮೆ, ಒಳ ಹೊಕ್ಕಾಗ ಎಷ್ಟು ನೋಡಿದರೂ ಮುಗಿಯದು ಅನಿಸುವಂತಹ ಭಾವನೆ. ನೋಡಿದ ನಾವೇ ಧನ್ಯರು..... ನಾವೆಷ್ಟು ನಮ್ಮ ಮನವನ್ನು ಗೊಂದಲದ ಗೂಡಲ್ಲಿ ಮುಳುಗಿಸಿದರೂ ಕೂಡ ಅಲ್ಲಿನ ರಮಣೀಯ ದೃಶ್ಯಗಳು ನಮ್ಮನ್ನು ಮೌನಿಗರನ್ನಾಗಿ ಮಾಡುತ್ತಿತ್ತು. ಅಷ್ಟೊಂದು ಸುಂದರ.

ನಂತರ ಒಂದು ತಂಡ ಸಮುದ್ರದ ಅಲೆಗಳ ಅಬ್ಬರದ ಕಡೆ ಹೊರಟರೆ, ಇನ್ನೊಂದು ತಂಡ ಎರಡು ದಿನದಿಂದ ನಡೆಯುತ್ತಿದ್ದ ಜಾತ್ರೆಯ ಸಂತೆಯಲ್ಲಿ ಪಾಲ್ಗೊಂಡಿತು. ತದನಂತರ ಒಂದು ಘಂಟೆಯಲ್ಲಿ ಎರಡೂ ತಂಡಗಳು ಒಟ್ಟಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡು, ಅಮೇಲೆ ಹೋಟೇಲ್ ಒಂದರಲ್ಲಿ ಚಾ ಕುಡಿದು ರೈಲು ಬರುವ ಸಮಯವಾದ್ದರಿಂದ ಭಾರವಾದ ಮನಸ್ಸಿನಿಂದ ರೈಲು ನಿಲ್ದಾಣಕ್ಕೆ ಬಂದೆವು. ರೈಲು ಬಂದೇ ಬಿಟ್ಟಿತು.....

ನಾವೆಲ್ಲರೂ ಪುನಃ ಒಂದೇ ಬೋಗಿಯಲ್ಲಿ ಸೇರಿಕೊಂಡು ಪುನಃ ನಮ್ಮ ಮೋಜಿನ ಆಟ ಶುರು ಮಾಡಿದೆವು. ಈ ಬಾರಿ ಕಿತ್ತಳೆಹಣ್ಣಿನ ಅಬ್ಬರ. ಆದರಿಂದ ಮೋಜು ಪಡುವಂತ ಆಟ. ಎರಡೂವರೆ ಘಂಟೆ ಪ್ರಯಾಣ ಕೇವಲ ಕಣ್ಣು ತೆರೆಯುದರೊಳಗೆ ನಮ್ಮ ಊರು ಬಂದೇ ಬಿಟ್ಟಿತು. ನಮಗಾಗಿ ನಮ್ಮನ್ನು ತಂದು ಬಿಟ್ಟಿದ್ದ ಗಾಡಿಗಳು ನಮಗಾಗಿ ಕಾದಿತ್ತು. ಎಲ್ಲರಿಗೂ ಶುಭವಿದಾಯ ಹೇಳುತ್ತಾ ಮುರ್ಡೇಶ್ವರ ನೆನಪಿನ ಗುಂಗಿನಲ್ಲಿ ನಮ್ಮ ನಮ್ಮ ಮನೆಗೆ ತೆರಳಿದೆವು.

**ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ**
ಶ್ರೀ ಸುಬ್ರಹ್ಮಣ್ಯ ಸಭಾ ಭವನ, ಲಾಯಿಲ, ಬೆಳ್ತಂಗಡಿ

ಆತ್ಮೀಯರೇ,

ತಾ.23-04-2017ನೇ ಭಾನುವಾರ ಬೆಳ್ತಂಗಡಿ ತಾಲೂಕು ಲಾಯಿಲದಲ್ಲಿರುವ ನಮ್ಮ ಸುಬ್ರಹ್ಮಣ್ಯ ಸಭಾಭವನದಲ್ಲಿ ಶ್ರೀ ಸುಬ್ರಹ್ಮಣ್ಯ ಹೋಮವನ್ನು ವೆ| ಮೂ| ಜಗದೀಶ ಭಟ್ಟರವರ ಪೌರೋಹಿತ್ಯದಲ್ಲಿ ನೆರವೇರಿಸುವುದಾಗಿ ನಿಶ್ಚಯಿಸಿರುತ್ತೇವೆ. ಶ್ರೀ ಗುರುದೇವತಾನುಗ್ರಹದಿಂದ ನಡೆಯಲಿರುವ ಈ ಶುಭ ಕಾರ್ಯದಲ್ಲಿ ತಾವೆಲ್ಲರೂ ಪಾಲ್ಗೊಂಡು ಕೃತಾರ್ಥರಾಗಬೇಕೆಂದು ಅಪೇಕ್ಷಿಸುತ್ತೇವೆ.

-ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ

**ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು**
ಇದರ ಆಡಳಿತಕ್ಕೆ ಒಳಪಟ್ಟ
**ಹಿರಿಯ ನಾಗರಿಕರ / ಬ್ರಾಹ್ಮಣ ಪುರುಷರ / ವಿದ್ಯಾರ್ಥಿಗಳ ವಸತಿ ನಿಲಯವು**
ತಾ. 01.05.2017ರಿಂದ ಪುತ್ತೂರಿನ ಮುರದಲ್ಲಿರುವ "ಶಿವ ಸದನ" ನವೀಕೃತ ಕಟ್ಟಡದಲ್ಲಿ ಪ್ರಾರಂಭವಾಗಲಿದೆ. ಸುಸಜ್ಜಿತ ಕೊಠಡಿಗಳು ಹಾಗೂ ಮಿತದರದಲ್ಲಿ ಶುಚಿರುಚಿ ಊಟದ ವ್ಯವಸ್ಥೆ ಇರುತ್ತದೆ.
ಶ್ರೀ ಕರುಣ್ ರಾವ್, ಬೆಳ್ಳೆ - ಮೊ : 9243309120    ಶ್ರೀ ಅನಿಲ್ ರಾವ್ ಜಿ.ಎಸ್. - ಮೊ : 9880037110
ಶ್ರೀ ಶ್ರೀಕಾಂತ್ ರಾವ್ ಪಿ. - ಮೊ : 9343361618

**ಶ್ರೀಶಾರದಾ ಪತ್ರಿಕೆಗೆ ಜಾಹೀರಾತು ನೀಡಿ ಪ್ರೋತ್ಸಾಹಿಸಿದ ಸಂಸ್ಥೆಗಳು ಹಾಗೂ ಮಹನೀಯರಿಗೆ ಶ್ರೀಶಾರದಾ ವೇದಿಕೆಯ ಧನ್ಯವಾದಗಳು**

| | | | |
|---|---|---|---|
| 1. | ದೀಪಿಕಾ ಸ್ಟುಡಿಯೋ | - | ಶ್ರೀ ವಾಸುದೇವರಾವ್ ಕೆ. |
| 2. | ಹರಿಕೃಷ್ಣ ಡಿಜಿಟಲ್ | - | ಶ್ರೀ ವಿಶ್ವನಾಥ್ ಶ್ಯಾನುಭಾಗ್ ಟಿ. |
| 3. | ದೀಪಾ ಎಂಟರ್‌ಪ್ರೈಸಸ್ | | |
| 4. | ಜಲಜ ಸ್ಕಿನ್ ಆ್ಯಂಡ್ ಕಾಸ್ಮೆಟಿಕ್ ಕ್ಲಿನಿಕ್ | - | ಡಾ| ಸನತ್ ರಾವ್ |
| 5. | ಶ್ರೀಶಾರದಾ ಕೋ-ಆಪರೇಟಿವ್ ಸೊಸೈಟಿ | | |
| 6. | ರಾಜೇಶ್ ಪವರ್‌ಪ್ರೆಸ್, ಪುತ್ತೂರು | - | ಶ್ರೀ ಎಂ.ಎಸ್.ರಘುನಾಥ ರಾವ್ |
| 7. | ಗಣೇಶ್ ಹೆಬ್ಬಾರ್ ಆ್ಯಂಡ್ ಅಸೋಸಿಯೇಟ್ಸ್ | - | ಶ್ರೀ ಗಣೇಶ್ ಹೆಬ್ಬಾರ್ |
| 8. | ಶ್ರೀ ಮಾಳವಿಕ ಎಸೋಸಿಯೇಟ್ಸ್ | - | ಶ್ರೀ ಶೈಲೇಶ್ ರಾವ್ |
| 9. | ಶ್ರೀ ದೇವಿಕೃಪಾ ಏಜೆನ್ಸೀಸ್ | - | ಶ್ರೀ ಜನಾರ್ದನ ರಾವ್ |
| 10. | ಶೋಭಾ ಡಿಜಿಟಲ್ ಸ್ಟುಡಿಯೋ ಬೆಳವಾಯಿ | - | ಶ್ರೀ ದೇವಾನಂದ ಭಟ್ |
| 11. | ನವದುರ್ಗಾ ಶೇರ್ಸ್ ಎಂಡ್ ಸರ್ವಿಸ್ | - | ಶ್ರೀ ಪ್ರದೀಪ್ ಕೆ.ರಾವ್ |
| 12. | ಶ್ರೀಮಾತಾ ಜ್ಯೋತಿಷ್ಯಾಲಯ | - | ಶ್ರೀ ರಾಘವೇಂದ್ರ ಭಟ್ |
| 13. | ಯಶಸ್ವಿ ಎಂಟರ್‌ಪ್ರೈಸಸ್ | - | ಶ್ರೀ ಉದಯಚಂದ್ರ ರಾವ್ |
| 14. | ಹೆಬ್ಬಾರ್ ಎಂಟರ್‌ಪ್ರೈಸಸ್ | - | ಶ್ರೀ ಮಂಜುನಾಥ ಹೆಬ್ಬಾರ್ |
| 15. | ವೈಷ್ಣವಿ ಜ್ಯೋತಿಷ್ಯಾಲಯ | - | ಶ್ರೀ ಚಿದಾನಂದ ಭಟ್ |
| 16. | ತ್ರಿಶೂಲಿನಿ ಟೂರಿಸ್ಟ್ ಬೈಲೂರು | - | ಶ್ರೀ ಸಂಪತ್‌ಕುಮಾರ್ |
| 17. | ಕರಣ್ ಸ್ಟುಡಿಯೋ, ಪಡುಬಿದ್ರಿ | - | ಶ್ರೀ ಸುಧಾಕರ್‌ರಾವ್ ಕೆ. |
| 18. | ಸ್ಕಂದ ಸ್ಟುಡಿಯೋ, ಪೆರ್ಡೂರು | - | ಶ್ರೀ ಅಶ್ವತ್ಥ್ |

-ಆಡಳಿತ ಮಂಡಳಿ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)**
ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.

ಆತ್ಮೀಯರೇ,

ನಮ್ಮ ಸಂಘವು ಆರಂಭಗೊಂಡು
50 ವರ್ಷಗಳು ಸಂಪೂರ್ಣಗೊಳ್ಳುತ್ತಿರುವ ಶುಭ ಸಂದರ್ಭದಲ್ಲಿ

**ನೂತನ ವಿಳಾಸ ಪುಸ್ತಕದ ಬಿಡುಗಡೆ**
**ಸ್ಮರಣಸಂಚಿಕೆಯ ಬಿಡುಗಡೆ ಹಾಗೂ**
**ಸುವರ್ಣ ಮಹೋತ್ಸವ ಸಂಭ್ರಮವನ್ನು**

ತಾ.28-05-2017ನೇ ರವಿವಾರ ಆಚರಿಸಲಿದ್ದೇವೆ.

ಈ ಪ್ರಯುಕ್ತ ಮುಂಜಾನೆ 8-00 ಗಂಟೆಯಿಂದ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿವೆ. ಪೂರ್ವಾಹ್ನ 10-00ರಿಂದ ಸಭಾ ಕಾರ್ಯಕ್ರಮ ಜರುಗಲಿದ್ದು, ಮಧ್ಯಾಹ್ನ ಭೋಜನಕೂಟದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಸಮಾಜ ಬಾಂಧವರೆಲ್ಲರಿಗೂ ಆದರದ ಸ್ವಾಗತವನ್ನು ಕೋರುವ
ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸರ್ವಸದಸ್ಯರು

## ಪುಸ್ತಕ ಲೋಕಾರ್ಪಣೆ ಸಮಾರಂಭ



ದಿನಾಂಕ 09-03-2017ರಂದು ಸಾಹಿತ್ಯ ನಂದನ ಪ್ರಕಾಶನ, ಬೆಂಗಳೂರು ಇವರು ಪ್ರಕಟಿಸಿರುವ ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ ಹಾಗೂ ಪ್ರಾಂಶುಪಾಲರಾದ ಶ್ರೀ ಎನ್.ಪದ್ಮನಾಭ ರಾವ್ ಇವರು ಬರೆದ ''ನೆನಪಿನ ಅಂಗಳದಿಂದ ನಮ್ಮ ಗುರು'' ಎಂಬ ಕೃತಿಯನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಸಿ.ಆರ್. ಕರಿಸಿದ್ಧಪ್ಪನವರು ಬೆಂಗಳೂರಿನಲ್ಲಿರುವ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸರ್ಕಾರಿ ಗ್ರಂಥಾಲಯ ತರಬೇತಿ ಶಾಲೆಯಲ್ಲಿ ಜರುಗಿದ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಿದರು. ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರಾದ ಡಾ। ಸತೀಶ್‌ಕುಮಾರ್ ಹೊಸಮನಿ ಹಾಗೂ ಡಾ। ಆರ್.ಶಿವಣ್ಣ, ಅಧ್ಯಕ್ಷರು, ಬಸವತತ್ತ್ವ ಪ್ರಚಾರ ಕೇಂದ್ರ ಇವರು ಆಗಮಿಸಿ ಸಂದರ್ಭೋಚಿತವಾಗಿ ಮಾತನಾಡಿದರು. ಪುಸ್ತಕ ಪರಿಚಯವನ್ನು ಶ್ರೀ ಆರ್.ಕೆ.ಬಡಿಗಣ್ಣವರ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರು ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಟಿ.ಮಲ್ಲೇಶಪ್ಪ, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ವಹಿಸಿದ್ದರು. ಸಮಾರಂಭದಲ್ಲಿ ಡಾ। ಎ.ವೈ.ಅಸುಂಡಿ, ನಿವೃತ್ತ ಪ್ರಾಚಾರ್ಯರು ಮತ್ತು ಡಾ। ಪಿ.ಸದಾಶಿವಮೂರ್ತಿ, ನಿವೃತ್ತ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾಲಯ ಇವರುಗಳು ಉಪಸ್ಥಿತರಿದ್ದು, ಸಭೆಯನ್ನು ಚಂದಗಾಣಿಸಿದರು ಮತ್ತು ಶ್ರೀ ವಿ.ಹೇಮಂತ್‌ಕುಮಾರ್ ಸಾಹಿತ್ಯ ನಂದನ, ಬೆಂಗಳೂರು ಇವರು ಕೂಡಾ ಉಪಸ್ಥಿತರಿದ್ದರು.

ಸಮಾರಂಭದ ಪ್ರಾರಂಭದಲ್ಲಿ ಶ್ರೀ ಎನ್. ಪದ್ಮನಾಭ ರಾವ್ ಇವರು ಸಭೆಗೆ ಆಗಮಿಸಿದ ಸರ್ವರನ್ನೂ ಸ್ವಾಗತಿಸಿದರು ಮತ್ತು ಅತಿಥಿಗಳಿಗೆ ಪುಷ್ಪಗುಚ್ಛವನ್ನು ನೀಡಿ, ಶಾಲು ಹೊದಿಸಿ, ನೆನಪಿನ ಕಾಣಿಕೆಯೊಂದಿಗೆ ಸತ್ಕರಿಸಿದರು ಮತ್ತು ಸಮಾರಂಭದ ಪೂರ್ವದಲ್ಲಿ ಶ್ರೀ ರಮೇಶ್ ಜಮದಗ್ನಿ ಇವರು ಸುಶ್ರಾವ್ಯವಾದ ಭಕ್ತಿಗೀತೆಗಳನ್ನು ಹಾಡಿ ಸಭೆಗೆ ಸಂಗೀತದ ರಸದೌತಣವನ್ನು ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಮನಮುಟ್ಟುವಂತೆ ಶ್ರೀ ಬಿ.ಆರ್.ಹಿರೇಮಠ, ನಿವೃತ್ತ ಉಪನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ನೆರವೇರಿಸಿದರು. ಶ್ರೀ ಚಂದ್ರಶೇಖರ್, ಉಪನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ವಂದನಾರ್ಪಣೆಯನ್ನು ಮಾಡಿದರು. ಕೊನೆಗೆ ಮಧ್ಯಾಹ್ನದ ಲಘು ಭೋಜನದೊಂದಿಗೆ ಸಭೆಯು ಸಂಪನ್ನಗೊಂಡಿತು.

## ಛಲಗಾತಿ ಕಲಾವಿದೆ ಸುಧಾ ರಾವ್



